ಶ್ರೀ ವೀರೇಂದ್ರ ಪಾಟೀಲ್.—ಎಂದು ಅಗ್ರಿಮೆಂಟ್ ಆಯಿತು. ಟೆಂಡರ್ ಯಾವಾಗ ಕರೆಯಲಾಯಿತು ಎಂಬ ವಿವರಗಳು ಈಗ ಇಲ್ಲಿ ಇಲ್ಲ. ನನಗೆ ಗೊತ್ತಿರುವಂತೆ ಬಾಲಾಜಿ ಕಂಪನಿಯವರು ಯಾವ ತಕರಾರನ್ನು ಮಾಡಿಲ್ಲ. ಅವರು ಕೆಲಸ ಮಾಡುತ್ತಿದ್ದಾರೆ. ಇಬ್ಬರು ಕಂಟ್ರಾಕ್ಟರುಗಳು ತಕರಾರುಮಾಡಿರುವುದರಿಂದ ಕೆಲಸ ನಿಂತಿದೆ. ಈ ಮಧ್ಯೆ ಮೇಷಿನರಿ ಕೆಲಸ ನಡೆಯುತ್ತಿದೆ. ಕೆಲಸ ನಿಲ್ಲಿಸಿರುವ ಬಗ್ಗೆ ಎಂ. ಐ. ಪಿ. ಸಿ. ಬೋರ್ಡಿನಲ್ಲಿ ವಿಚಾರ ಮಾಡಿದ್ದೇವೆ. ಕೆಲಸ ನಿಧಾನವಾಗುವುದನ್ನು ತಪ್ಪಿಸುವ ನಲುವಾಗಿ ಇಲಾಖೆಯವರೇ ಉಳಿದ ಕಾಂಗಾರಿಯನ್ನು ಪ್ರಾರಂಭ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಬಾರೋ ಏರಿಯಾ ಸಿಕ್ಕದಿರುವುದರಿಂದ ಕೆಲಸ ನಿಲ್ಲಿಸಿದ ಬೇಕಾಯಿತೆಂದು ಹೇಳಿದಿರಿ. ಇದನ್ನು ಎಸ್ಟಿಮೇಟ್‌ನಲ್ಲಿ ಪ್ರೊವೈಡ್ ಮಾಡಬೇಕಾಗಿತ್ತು ಎಂದು ವಿಧಾನ್ಯ ಹಿರಿಯ ಸದಸ್ಯರು ಈಗ ಕೇಳಿದರು. ಬೇರೆ ಅಣೆಕಟ್ಟಿನ ಕೆಲಸಗಳಿಗೆ ಟೆಂಡರ್ ಕರೆದಾಗ ಮಣ್ಣು ತೆಗೆದುಕೊಳ್ಳುವುದಕ್ಕಾಗಿ ಸಾಕಷ್ಟು ಪ್ರದೇಶಗಳನ್ನು ದೊರಕಿಸಿಕೊಡುತ್ತೇವೆಂದು ಎಸ್ಟಿಮೇಟಿನಲ್ಲಿ ಪ್ರೊವೈಡ್ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು?

ಶ್ರೀ ವೀರೇಂದ್ರಪಾಟೀಲ್.—ಮಾನ್ಯ ಸದಸ್ಯರು ನನ್ನ ಉತ್ತರವನ್ನು ಅರ್ಥಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಮರಿಸಾಮಪ್ಪನಿಗೆ ಏನು ಕೆಲಸ ವಹಿಸಲಾಗಿತ್ತೋ ಆ ಕೆಲಸ ಮಾಡುವುದರ ನಲುವಾಗಿ ಇಂತಹ ಭೂಮಿಯಲ್ಲಿ ಮಣ್ಣನ್ನು ತೆಗೆದುಕೊಳ್ಳಬೇಕೆಂದು ಹೇಳಲಾಗಿತ್ತು. ಆದರೆ ಆ ಭೂಮಿ ಖಾಸಗೀಯವರಧ್ಯಾಗಿದ್ದರಿಂದ, ಲ್ಯಾಂಡ್ ಅಕ್ವಿಜಿಷನ್ ರೂಲ್ಸ್ ಪ್ರಕಾರ ಆ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದು ಸ್ವಲ್ಪ ತಡವಾಯಿತು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಕೆಲವು ದಿವಸಗಳ ಹಿಂದೆ ಇದೇ ಪಿಲ್ಲೆಗೆ ಸಂಬಂಧಪಟ್ಟ ಅಸೆಂಬ್ಲಿಯ ಸದಸ್ಯರು ತಮ್ಮ ಬಳಿಗೆ ಬಂದು ಈ ಯೋಜನೆಗೆ ಸಂಬಂಧಪಟ್ಟಂತೆ ಇರುವ ಚೀಫ್ ಇಂಜಿನಿಯರ್ ಅವರು ಪ್ಲಾನ್ಸ್ ಅಂಡ್ ಡಿಸೈನ್ಸ್‌ನ್ನು ಮಾಡಿಕೊಡದಿರುವುದರಿಂದ ಕೆಲಸ ನಿಧಾನವಾಗಿದೆ, ಆದ ಕಾರಣ ಚೀಫ್ ಇಂಜನಿಯರ್ ಅವರನ್ನು ವರ್ಗಮಾಡಿ ಬೇರೆಯವರನ್ನು ನೇಮಕ ಮಾಡಬೇಕೆಂದು ಕೇಳಿದ್ದು ನಿಜವೇ ? ಎರಡನೆಯದಾಗಿ ಕಂಟ್ರಾಕ್ಟ ಕೊಟ್ಟಮೇಲೆ ಆ ಕಂಟ್ರಾಕ್ಟರಿಗೆ ಬೇಕಾದ ಮಣ್ಣನ್ನು ಪಡೆಯಲು ಸಾಕಷ್ಟು ಪ್ರದೇಶಗಳನ್ನು ಸಕಾಲದಲ್ಲಿ ಒದಗಿಸದೇ ಇರುವುದರಿಂದ, ಆತನು ಆರ್ಬಿಟ್ರೇಷನ್‌ಗೆ ಹೋಗಿ ಹೆಚ್ಚಿನ ಕಾಂಪನ್‌ಷೇಷನ್ನು ಪಡೆಯುವುದಕ್ಕೆ ಅವಕಾಶ ಇದೆ ಅಲ್ಲವೇ ?

ಶ್ರೀ ವೀರೇಂದ್ರಪಾಟೀಲ್.—ಹೇಮಾವತಿ ಯೋಜನೆಯ ಬಗ್ಗೆ ಒಬ್ಬರು ಚೀಫ್ ಇಂಜನಿಯರ್ ಇಲ್ಲ. ಮತ್ತು ಈಗ ಇರುವ ಚೀಫ್ ಇಂಜನಿಯರನ್ನು ಬದಲಾವಣೆ ಮಾಡಬೇಕೆಂದು ಯಾರೂ ಕೂಡ ನನ್ನ ಹತ್ತಿರ ಬಂದಿಲ್ಲ. ಯಾರೂ ರೆಪ್ರೆಸೆಂಟೇಷನ್ ಕೊಟ್ಟಿಲ್ಲ. ಮತ್ತು ಕಂಟ್ರಾಕ್ಟರ್ ಆರ್ಬಿಟ್ರೇಷನ್‌ಗೆ ಹೋಗಿ ಹೆಚ್ಚಿನ ಕಾಂಪನ್‌ಸೇಷನ್‌ಕ್ಲೈಮ್ ಮಾಡುವ ಕ್ಲಾಸನ್ನು ಕೈಬಿಟ್ಟು ಬಹಳ ದಿವಸವಾಯಿತು.

ಅಧ್ಯಕ್ಷರು.— ಈಗ ಪ್ರಶ್ನೋತ್ತರ ಕಾಲ ಮುಗಿಯಿತು.

SHORT NOTICE QUESTION AND ANSWER
Kidnapping of a Harijan Woman near Madivala

4. Sri M. H. JAYAPRAKASH NARAYAN (Sirsi).—

Will the Chief Minister be pleased to state:—

(*a*) the person who kidnapped by cheating, a Harijan woman who was engaged in brick kiln work near Madivala on Sankranti day *i e.*, 14th January 1970 ;

(*b*) whether the uncle of the said Harijan woman gave a compaint to the Police regarding the same; if so, the protection given by the police to the said woman;

(SRI M. H. JAYAPRAKASH NARAYAN)

(*c*) the person who mollested her and the protective measure taken by them in respect of the said incident ?

Sri VEERENDRA PATIL (Chief Minister).—

(*a*) It is alleged that the following three persons kidnapped on 11th January 1970. Srimathi Muniyamma *alias* Srimathi Venkatamma:

1 Chowarappa
2 Ramaswamy
3 Mahboob

(*b*) and (*c*) Shri Muniswamy, uncle of Srimathi Muniyamma gave a complaint at 5 A.M. on 15th January 1970 to the Madivala Police Station. A case under Sections 170 and 365 I P.C. was registered. She was traced at 3 P.M. on 15th January 1970 and Sriyuths Chowrappa and Ramaswamy were also arrested the same day. Efforts are being made to apprehend the other accused. Investigation is under progress.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಸಿ. ಐ. ಡಿ. ಅಧಿಕಾರಿಗಳ ಸಹಾಯದಿಂದ ಚೌರಪ್ಪ, ರಾಮಸ್ವಾಮಿ ಮತ್ತು ಮಹಬೂಬ್ ಎಂಬುವರು ಶ್ರೀಮತಿ ಮುನಿಯಮ್ಮ ಅಲಿಯಾಸ್ ಶ್ರೀಮತಿ ವೆಂಕಟಮ್ಮನನ್ನು ಅಪಹರಿಸಿ ಹೋಟಲ್‌ಗೆ ಕರೆದುಕೊಂಡು ಹೋಗಿ ತಿಂಡಿತಿನ್ನಿಸಿ, ಸಿನಿಮಾಗೆ ಕರೆದುಕೊಂಡು ಹೋಗಿ ಸಿನಿಮಾ ತೋರಿಸಿ ನಂತರ ಎಷ್ಟು ದಿವಸ ಇಟ್ಟುಕೊಂಡಿದ್ದರು ? ಯಾವಾಗ ಎಲ್ಲಿಗೆ ಕರೆದುಕೊಂಡು ಬಂದು ಬಿಟ್ಟರು ಮತ್ತು ಪೋಲೀಸರಿಗೆ ದೂರು ಯಾವಾಗ ಬಂತು ?

† ಶ್ರೀ ವೀರೇಂದ್ರ ಪಾಟೀಲ್.—ಈ ಕೇಸ್ ನಡೆದಿದ್ದು 14-1-1970ರಲ್ಲಿ. ಮೂರುಜನ ಸೇರಿಕೊಂಡು ಆಕೆಯನ್ನು ಕರೆದುಕೊಂಡು ಹೋದಮೇಲೆ 15-1-1970ರಲ್ಲಿ ಪತ್ತೆಹಚ್ಚಿ ಚೌರಪ್ಪ, ರಾಮಸ್ವಾಮಿ ಮತ್ತು ಆ ಹೆಣ್ಣುಮಗಳನ್ನು ಅರೆಸ್ಟ್ ಮಾಡಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ರೀತಿಯುಂದ ನಮ್ಮ ರಾಜ್ಯದಲ್ಲಿ ಹರಿಜನರ ಮೇಲೆ ಅತ್ಯಾಚಾರ ನಡೆಯುತ್ತಿದೆ. ಇಂತಹ ಒಂದು ಪರಿಸ್ಥಿತಿಯನ್ನು ತಡೆಗಟ್ಟುವುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಈಗ ಅರೆಸ್ಟ್ ಮಾಡಿರುವ ಇಬ್ಬರಿಗೆ ಮೂರು ಪಟ್ಟೆ ಹಾಕಿ ಬೆಂಗಳೂರಿನ ಬೀದಿಗಳಲ್ಲಿ ಕತ್ತೆಯಮೇಲೆ ಮೆರವಣಿಗೆ ಮಾಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ತರಹದ ಘಟನೆಗಳು ನಮ್ಮ ರಾಜ್ಯದಲ್ಲಿಯೇ ನಡೆಯುತ್ತಿಲ್ಲ, ಬೇರೆ ರಾಜ್ಯಗಳಲ್ಲಿಯೂ ನಡೆಯುತ್ತಿದೆ. ಮಾನ್ಯ ಸದಸ್ಯರು ಹೇಳಿದಂತೆ ಅರೆಸ್ಟ್ ಆದವರನ್ನು ಕತ್ತೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಇದ್ದರೆ ಮಾಡಬಹುದಾಗಿತ್ತು.

ಶ್ರೀ ಕೆ. ಎಚ್. ರಂಗನಾಥ್.—15-1-1970 ರಂದು 3 ಗಂಟೆಗೆ ಆಕೆಯನ್ನು ಪತ್ತೆಹಚ್ಚಲಾಯಿತು ಎಂದು ಇಲ್ಲಿ ಹೇಳಿದೆ. ಮತ್ತು 19-1-1970 ರಂದು 5 ಗಂಟೆಗೆ ಪೋಲೀಸ್ ಠಾಣೆಗೆ ದೂರು ಬಂತು ಎಂದು ಹೇಳಲಾಗಿವೆ. ಇದರಲ್ಲಿ ಯಾವುದು ಸರಿ ?

ಶ್ರೀ ವೀರೇಂದ್ರ ಪಾಟೀಲ್.—ಪೋಲೀಸ್‌ಸ್ಟೇಷನ್‌ಗೆ ಕಂಪ್ಲೆಂಟ್ ಬಂದಿದ್ದು 15-1-1970 ರಂದು ಬೆಳಿಗ್ಗೆ 5 ಗಂಟೆಯ ಸಮಯದಲ್ಲಿ. ಪತ್ತೆ ಹಚ್ಚಿದ್ದು ಅದೇ ಮಧ್ಯಾಹ್ನ ಮೂರು ಗಂಟೆಯ ಸಮಯದಲ್ಲಿ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಶ್ರೀ ಚೌರಪ್ಪ ಮತ್ತು ರಾಮಸ್ವಾಮಿ ಎನ್ನುವವರನ್ನು ಇಬ್ಬರನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿದ್ದಿರಿ. ಮೂರನೆಯ ಅಪರಾಧಿ ಸಿಕ್ಕಲಿಲ್ಲ ಎನ್ನ

ತಕ್ಕಂಥ ಉತ್ತರವನ್ನು ಹೇಳುತ್ತಿದ್ದೀರಿ. ಮೂರನೆ ಅಪರಾಧಿಗೆ ಪೋಲೀಸಿನವರು ಪರೀಕಾಗಿದ್ದಾರೆ, ಆ ಅಪರಾಧಿ ಪೋಲೀಸಿನವರಿಗೆ ಸಂಬಂಧೀಕನಾಗಿರುವುದರಿಂದ ಅವನನ್ನು ಹಿಡಿಯುವುದಕ್ಕೆ ಇವರು ಇಷ್ಟಪಡುವುದಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಒಪ್ಪಿಕೊಳ್ಳುವುದಿಲ್ಲ. ಅದನ್ನು ಒಪ್ಪಿಕೊಳ್ಳಬಾರದು ಎನ್ನುವ ಉದ್ದೇಶವಲ್ಲ. ಆ ರೀತಿಯಿಂದ ಪೋಲೀಸಿನವರ ಉದ್ದೇಶ ಇಲ್ಲ.

ಶ್ರೀ ವಿ. ಎನ್. ಪಾಟೀಲ್.—ಈಗ ಅವರ ಬಗ್ಗೆ ಏನುಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಾವು ಹೇಳಿಲಿಲ್ಲ. ಆ ವಿಚಾರದಲ್ಲಿ ಏನಾದರೂ ಸ್ಟ್ರಾಂಗ್ ಸ್ಟೆಪ್ಸ್ ತೆಗೆದುಕೊಂಡಿದ್ದೀರಾ? ಇದರಲ್ಲಿ ಯಾರದಾದರೂ ಕೈವಾಡ ಇದೆಯೇ? ಮತ್ತೊಬ್ಬನನ್ನು ಹಿಡಿಯದೇ ಇರುವುದಕ್ಕೆ ಕಾರಣ ವೇನು? ಅಥವಾ ಇದಕ್ಕೆ ಪೋಲೀಸಿನವರ ಅದ್ಯಕ್ಷತೆ ಕಾರಣವೆ?

ಶ್ರೀ ವೀರೇಂದ್ರ ಪಾಟೀಲ್.—ಪೋಲೀಸಿನವರಿಗೆ ಅವನನ್ನು ಹಿಡಿಯಬಾರದು ಎನ್ನುವ ಪ್ರಶ್ನೆಯೇನೂ ಇಲ್ಲ. ಇದೇನು ಒಂದು ರಾಜಕೀಯ ಘಟನೆಯೂ ಅಲ್ಲ. ಈಗ ಒಬ್ಬರು ಸಿಕ್ಕಬೇಕಾಗಿದೆ. ಆ ಹೆಣ್ಣು ಮಗಳ ಬಗ್ಗೆ ಟೆಸ್ಟ್ ಮಾಡುವುದಕ್ಕೆ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿದ್ದರು. ಈಗ ಅಲ್ಲಿಂದ ರಿಪೋರ್ಟ್ ಬಂದಿದೆಯೆಂದು ಕಾಣುತ್ತದೆ ಆ ಮೂರು ಜನಗಳ ಪೈಕಿ ಒಬ್ಬನು ತುಮಕೂರು ಕಡೆ ಓಡಿ ಹೋಗಿದ್ದಾನೆ ಎಂದು ವರ್ತಮಾನ ಬಂದಿದೆ. ಅವನನ್ನು ಹಿಡಿಯುವುದಕ್ಕೆ ಪೋಲೀಸಿನವರು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಂ. ನಾಗಪ್ಪ.—ಅವರು ಆ ಹೆಣ್ಣುಮಗಳನ್ನು ಪೋಲೀಸ್‌ಸ್ಟೇಷನ್, ರೇಪ್ ಮಾಡಬೇಕು ಎನ್ನುವ ಕಾರಣದಿಂದಲಾಗಲೀ ಅಥವಾ ಪೋರ್ನಿಬಲ್ ಆಗಿ ಮ್ಯಾರೇಜ್ ಮಾಡಿಕೊಳ್ಳಬೇಕು ಎನ್ನುವ ಕಾರಣದಿಂದಲಾಗಲೀ ಅಥವಾ ಯಾವ ಕಾರಣದಿಂದ. ಆ ಹೆಣ್ಣುಮಗಳನ್ನು ಅಪಹರಿಸಿದ್ದರು ಎನ್ನುವುದು ತಮಗೆ ಗೊತ್ತಿದೆಯೇ. ಏನು ಕಾರಣ ಎಂಬುದನ್ನು ತಿಳಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಆಕೆ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾಳೆ. All the three persons had outraged her modesty and raped her ಎಂದು ಆಕೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾಳೆ.

ಶ್ರೀ ಜಿ. ದುಗ್ಗಪ್ಪ.—ಸ್ಯಾಮಿ, ಇವೊತ್ತು 29ನೇ ತಾರೀಖು. ಈಗ 15 ದಿವಸಗಳಿಂದೀಚೆಗೆ ಇನ್‌ವೆಸ್ಟಿಗೇಷನ್ ರಿಪೋರ್ಟ್ ಬಂದಿದೆಯೇ? ಇನ್ನೊಬ್ಬರು ಸಿಕ್ಕಿದ್ದಾರೆಯೇ? ಪೋಲೀಸಿನವರು ಯಾವಾಗ ಚಾರ್ಜ್‌ಷೀಟ್ ಹಾಕುತ್ತಾರೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದ್ದೇನೆ. ಇಷ್ಟರಲ್ಲೇ ಚಾರ್ಜ್‌ಷೀಟ್ ಹಾಕುತ್ತಾರೆ. ಮೆಡಿಕಲ್ ರಿಪೋರ್ಟ್ ಬರಬೇಕಾಗಿತ್ತು ಅದು ಬಂದಿದೆ. ಒಬ್ಬ ಮನುಷ್ಯ ಸಿಕ್ಕಬೇಕಾಗಿತ್ತು ಅವನು ಇನ್ನೂ ಸಿಕ್ಕಿಲ್ಲ. ಒಂದುವೇಳೆ ಅವನು ಸಿಕ್ಕದಿದ್ದರೆ ಚಾರ್ಜ್‌ಷೀಟ್ ನಿಲ್ಲಿಸುವುದಕ್ಕಾಗುವುದಿಲ್ಲ. ಅದನ್ನು ಹಾಕುತ್ತಾರೆ. ತುಮಕೂರಿನ ಕಡೆ ಅವನು ಓಡಿಹೋಗಿದ್ದಾನೆಂದು ವರ್ತಮಾನ ಬಂದಿದೆ. ಆದ್ದರಿಂದ ಅವನನ್ನು ಹುಡುಕುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹೆಣ್ಣುಮಕ್ಕಳ ಪಾತಿವ್ರತ್ಯವನ್ನು ಹಾಳು ಮಾಡಿರತಕ್ಕವರಿಗೆ ಉಗ್ರವಾದ ಶಿಕ್ಷೆ ಕೊಡುವುದಕ್ಕೆ ತಕ್ಕ ರೀತಿಯಲ್ಲಿ ನಿಯಮಗಳನ್ನು ಮಾಡುತ್ತೀರಾ?

ಶ್ರೀ ವೀರೇಂದ್ರಪಾಟೀಲ್.—ಸರ್ಕಾರದ ಕೆಲಸ ಚಾರ್ಜ್‌ಷೀಟ್ ಹಾಕಿ ಕೇಸನ್ನು ಕೋರ್ಟಿಗೆ ದಾಖಲು ಮಾಡುವಂತಾಯ್ತು. ಶಿಕ್ಷೆ ಯಾವರೀತಿ ಕೊಡಬೇಕು ಎನ್ನುವುದು ಕೋರ್ಟಿಗೆ ಸಂಬಂಧಪಟ್ಟ ವಿಷಯ. ಅದು ನಮ್ಮಿಂದಲ್ಲ.

Sri J. P. SARVESH.—Will the Government assure the House that the Department will take sufficient interest in this case and produce proper witnesses so that the criminals may be punished?

Sri VEERENDRA PATIL.—There is nothing on record to show that the Police Department or officers were lethargic on the other hand they were very prompt. They received the complaint in the early morning at 5 A.M. and on that very day they have been arrested and

(SRI VEERENDRA PATIL)

only one accused is absconding. The Police Department is quite active, and I can assure that the department is not lathargic or indefferent In this case, I shall see that the culprits are punished.

QUESTIONS FOR ANSWERS ON THE DAY

(but not taken up)

General Hospital at Pavagada

134. Sri P. ANJANAPPA (Pavagada).—

Will the Minister for Health be pleased to state:—

the stage at which the starting of a General Hospital at Pavagada which was under their consideration as was stated by them is pending and the action taken by them in this respect ?

Sri Y. RAMAKRISHNA (Minister for Health).—

This matter is still under consideration. State Officers of Health and Family Planning are carrying on correspondence with the District Officers of Health and Family Planning, local Municipality and the Taluk Development Board. Their reply is awaited.

Agro Industries Corporation

144. Sri G. T. GOVINDA REDDY (Madhugiri).—

Will the Minister for Agriculture be pleased to state:—

(*a*) whether the Agro Industries Corporation is running with the full aid of Government or are there any partners;

(*b*) the different types of aids that are being given by the said Corporation to the ryots;

(*c*) whether business in artificial manure has been transacted if so, the arrangement made for the sale of manure;

(*d*) whether it is a fact that the said Corporation which was giving water lifting electric pumps to ryots on loan basis has stopped recently;

(*e*) if so, the reasons for the same ?

Sri B. RACHAIAH (Minister for Agriculture).—

(*a*) The Agro Industries Corporation is run by State and Centra Governments on partnership basis.